# ಮುಸುಕು ತೆಗೆದರೆ ಬೆನ್ನಲಿ ನಾಲಗೆ ಇದರ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi. Given without highlights.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao
3. **Note:** The wordings mentioned without highlights are as per Ref. 1 and the difference in wordings given in yellow highlights are as per Ref. 2.
4. **Note:** The singer has followed the wordings in Ref. 2.

ರಾಗ ಮುಖಾರಿ ಆದಿ ತಾಳ

ಮುಸುಕ ತೆಗೆದರೆ ಬೆನ್ನಿಲಿ ನಾಲಿಗೆ, ಇದರ
ಹೆಸರು ಬಲ್ಲವರುಂಟೆ ಪೇಳಿ ರಂಗಯ್ಯ (ಪೇಳಿರಿ ನರರೆ) ॥ ಪ ॥

ಸತ್ತಿಗೆ ತಲೆಯವಳು ನೆತ್ತಿಲಿ ಬಾಲದವಳು
ಕತ್ತಿನ ಕೆಳಗೆ ಕಪ್ಪಿನ ಕೊಪ್ಪಿನವಳು
ಸುತ್ತೇಳು ಮೈಗೆರಡು ಜೋಡು ಭಂಗಾರದ (ಭಂಗಾರ)
ಸೃಷ್ಟಿಯೊಳಗೆ ಇದರ ಹೆಸರು ಬಲ್ಲವರುಂಟೆ ॥ 1 ॥

ಜಡೆ ಮೆರಗುವ ಬಾಲೆ ಒಡಲೊಳು (ಒಡಲೊಳಗೆ ) ಕರುಳಿಲ್ಲ
ಬಿಡದೆ ಪಟ್ಟಾವಳಿಯುಟ್ಟು ಬಲ್ಲವಳು
ಅಡವಿಯೊಳಗೆ ಪುಟ್ಟಿ ಪಡೆದಳು ದೇಹವ
ಪೊಡವಿಯೊಳಗೆ ಇದರ ಹೆಸರು ಬಲ್ಲವರುಂಟೆ ॥ 2 ॥

ಬೇರಾಗಿ ಬೆರಳೈದು ಮೂರು ತಾನೊಂದಾಗಿ
ಯಾರು ಕಂಡರು ಎಂದು ನಸುನಗುತ
ಸೇರಿದ ಭಕುತರ ಪೊರೆವ ರಂಗಯ್ಯನ
ಸೇರಿ ಮೆಚ್ಚಿಸಿಕೊಳ್ಳೆ (ಮೆಚ್ಚಿಸಿಕೊಳ್ಳಿ) ಪುರಂದರ ವಿಠಲನ ॥ 3 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಇದು **ಕುಂಡಲಿನೀ ಯೋಗದ** ಸಂಕೇತವುಳ್ಳ ಪದ.

**ಮುಸುಕೆಂದರ** ಅವಿದ್ಯೆಯೆಂಬ ಆವರಣ; ಭೋಗಕ್ಕೆಂದು ಸಿದ್ಧವಾದ ಪಾಂಚಭೌತಿಕವಾದ ದೇಹ. ಸ್ಥೂಲ ದೇಹ. (ದೇಹಗಳು: ಸ್ಥೂಲ ಶರೀರ, ಅನಿರುದ್ಧ ಶರೀರ, ಲಿಂಗ ಶರೀರ, ಸ್ವರೂಪ / ಸೂಕ್ಷ್ಮದೇಹ). ಈ ಹೊದಿಕೆಯ ಒಳಗಿರುವ ಸೂಕ್ಷ್ಮದೇಹದ ರಚನೆ ಈ ಪದದ ವಸ್ತು. ಬೆನ್ನುಹುರಿ ಅಥವಾ ಬ್ರಹ್ಮದಂಡಕ್ಕೆ ಹೊಂದಿಕೊಂಡು ಅದರ ಸತ್ತ್ವವಾಗಿ ಉಳ್ಳ ಕುಂಡಲಿನೀ ಮಾರ್ಗ (ಸುಷುಮ್ನಾ ಮಾರ್ಗ) **(ಬೆನ್ನಿಲಿ ನಾಲಗೆ);** ಕುಂಡಲಿನಿಯು ಮೇಲಕ್ಕೆ ಹೋಗುವ ಪ್ರವೃತ್ತಿಯುಳ್ಳದ್ದು.

**'ಸತ್ತಿಗೆ ತಲೆ'** (ಛತ್ರಕ ಎನ್ನುವುದರ ತದ್ಭವ, ಕೊಡೆಯಂತೆ ಹರಡಿಕೊಂಡಿರುವುದು) ಶಿರೋಭಾಗದಲ್ಲಿರುವ ಸಹಸ್ರಾರ ಚಕ್ರ.

**'ನೆತ್ತಿಲಿ ಬಾಲ'** ವೆಂದರೆ ಊರ್ಧ್ವಗಾಮಿಯಾದ ಕುಂಡಲಿನಿಯ ಆಧಾರ ಸ್ಥಳ, ಮೂಲಾಧಾರ ಚಕ್ರ.

**'ಕತ್ತಿನ ಕೆಳಗೆ ಕಪ್ಪಿನ ಕೊಪ್ಪಿ'** ವಿಶುದ್ಧ ಚಕ್ರ.

**'ಮೈಗೆರಡು ಜೋಡು ಭಂಗಾರ'** ಎಂದರೆ ಎರಡು ಜಾಜ್ವಲ್ಯಮಾನವಾದ ದಳಗಳುಳ್ಳ ಆಜ್ಞಾ ಚಕ್ರ

**'ಜಡೆ ಮೆರಗುವ ಬಾಲೆ'** ಯೆಂದರೆ ವಜ್ರನಾಡಿಯೊಳಗಿರುವ ಚಿತ್ರಿಣಿ; ಸುಷುಮ್ನಾ ಮಾರ್ಗ. ಅದರೊಳಗೆ ಮತ್ತೆ ನಾಡಿಗಳಿಲ್ಲವಾಗಿ

**'ಒಡಲೊಳು ಕರುಳಿಲ್ಲ,' ಅವಳು ಉಟ್ಟಿರುವ 'ಪಟ್ಟಾವಳಿ'** ಅಗ್ನಿ ಸ್ವರೂಪವಾದುದು (ಇಡಾ ಸೂರ್ಯನೆಂದೂ ಪಿಂಗಳಾ ಚಂದ್ರನೆಂದೂ ನಡುವೆ ಇರುವ ಸುಷುಮ್ನಾ ಅಗ್ನಿಯೆಂದೂ ಗೋರಕ್ಷ ಪದ್ಧತಿಯ ಒಕ್ಕಣೆ).

**ಅವಳು ಹುಟ್ಟಿದ ‘ಅಡವಿ’** ಮೂಲಾಧಾರ ಚಕ್ರದಲ್ಲಿರುವ ಪೃಥ್ವೀ ಮಂಡಲ ರೂಪವಾದ ತ್ರಿಕೋಣ.

**‘ಬೇರಾಗಿ’** (ಬೇರೆಯಾಗಿ) ಎಂದರೆ ಮೂಲಾಧಾರದಲ್ಲಿ ಸ್ವಯಂಭೂ ಲಿಂಗವನ್ನು ಸುತ್ತರಿದು ನಿಂತು ಅಲ್ಲಿಂದ ಕವಲೊಡೆದು, **ಮೇಲೆ ಐದು ಚಕ್ರಗಳಲ್ಲಿ** (‘ಬೆರಳೈದು,’ ಸ್ವಾಧಿಷ್ಠಾನ, ಮಣಿಪೂರ, ಅನಾಹುತ, ವಿಶುದ್ಧ ಮತ್ತು ಆಜ್ಞಾ ಚಕ್ರಗಳಲ್ಲಿ) ಹರಿದು, ಇಡಾ ಪಿಂಗಳಾ ಸುಷುಮ್ನಾ ಮಾರ್ಗಗಳನ್ನು ಆಜ್ಞಾ ಚಕ್ರದಲ್ಲಿ ಒಂದುಗೂಡಿಸಿ (**‘ಮೂರು ತಾನೊಂದಾಗಿ’**), ಸಹಸ್ರಾರದಲ್ಲಿ ಬ್ರಹ್ಮಾನಂದವನ್ನು (**‘ನಸುನಗುತ’**) ಪಡೆದುಕೊಳ್ಳುವುದು ಇಲ್ಲಿನ ಗೂಢಾರ್ಥ.

**Classification:** Mundige
**Ankita:** purandara vittala
**Location:** NA
**Category:** Jeevanoddhaara, Mukti Marga
**Sub-Category:** nalige, nara, kappu, bangara, kaadu, ranga, chakra, kundalini,
**Pravachana:** NA
**Explanation:** NA